(ಶ್ರೀ ಎಚ್. ಸಿದ್ದವೀರಪ್ಪ.)

ನಾವು ಯೋಚನೆ ಮಾಡಬೇಕು. ಶ್ರೀಮಾನ್ ಪಾಪಣ್ಣ ನವರು ಈ ವಿಚಾರದಲ್ಲಿ ಮಾತನಾಡುತ್ತಾ ಇರತಕ್ಕ ಕೈಗಾರಿಕೆಯನ್ನು ಮೊದಲು ಅಭಿವೃದ್ಧಿಗೆ ತರುವ ವಿಚಾರವನ್ನು ಸೂಚಿಸಿರುತ್ತಾರೆ. ಈ ವಿಚಾರದಲ್ಲಿ ಹೊಸಹೊಸ ಕೈಗಾರಿಕೆಗಳನ್ನು ಒಂದು ಪ್ರದೇಶದಲ್ಲಿ ಸ್ಥಾಪಿಸುವುದಕ್ಕಿಂತ, ಮೊದಲು ಹಳೆಯ ಕೈಗಾರಿಕೆಯು ಶಿಥಿಲವಾಗದೇ ಅಭಿವೃದ್ಧಿ ಹೊಂದುವ ಕಡೆ ಮುನ್ನೆಚ್ಚರಿಕೆಯ ಕಾರ್ಯಕ್ರಮ ಕೈಗೊಳ್ಳುವುದು ಸರ್ಕಾರದ ನೀತಿಯಾಗಿದೆ. ಇದನ್ನು ಶ್ರೀ ಪ್ರಭಾಕರ್ ರವರು ಒಪ್ಪುತ್ತಾರೆಂದು ಭಾವಿಸುತ್ತೇನೆ.

ಈಗ ಪ್ರಕೃತ ನೆಲಮಂಗಲದ ಪರಿಸ್ಥಿತಿ ನೋಡಿದರೆ ಈಗಾಗಲೇ ಅಲ್ಲಿ ಒಂದು ಇಂಸ್ಟ್ರಿಯಲ್ ಸ್ಕೂಲು ಸ್ಥಾಪನೆ ಆಗಿದೆ. ಇರತಕ್ಕ ಸ್ಕೂಲ್ ಯಾವ ಪರಿಸ್ಥಿತಿ ಯಲ್ಲಿದೆಯೆಂಬುದನ್ನು ಶ್ರೀ ಪ್ರಭಾಕರ್ ರವರು ಯೋಚಿಸಬೇಕೆಂದು ಹೇಳುತ್ತೇನೆ. ಆ ಸ್ಕೂಲಿನಲ್ಲಿ ಹುಡುಗರನ್ನು ಕೈಗಾರಿಕೆ ಕೆಲಸಕಾರ್ಯಗಳಲ್ಲಿ ತರಬೇತು ಮಾಡಿ ಅವರು ಸ್ವತಂತ್ರ ಜೀವನ ಮಾರ್ಗ ವನ್ನು ಕಲ್ಪಿಸಿಕೊಳ್ಳಲ ಎಂಬುದೇ ಅದನ್ನು ಸ್ಥಾಪಿ ಸಿರುವ ಉದ್ದೇಶ. ಈ ಅವಕಾಶವನ್ನು ಸದುಪಯೋ ಗಪಡಿಸಿಕೊಂಡು ಅಲ್ಲಿಯ ಹುಡುಗರು ಹೆಚ್ಚು ಸಂಖ್ಯೆ ಯಲ್ಲಿ ಕಲತುಕೊಳ್ಳಲು ಮುಂದೆ ಬಂದರೆ ಇದಕ್ಕೆ ವಿಶೇಷ ಪ್ರೋತ್ಸಾಹ ಕೊಡಲು ಅವಕಾಶವಿದೆ. ಇದಕ್ಕಾಗಿ ಇಂಡಿಯಾ ಸರ್ಕಾರದವರೂ ಸಹ ಹಣವನ್ನೊದಗಿಸಿರುತ್ತಾರೆ. ಹಣದಕೊರತೆಯೇನೂ ಇಲ್ಲ. ಮುಖ್ಯವಾಗಿ ಅಲ್ಲಿಯ ಜನರು ಮುಂದೆ ಬಂದು ಈ ಕೈಗಾರಿಯ ಸ್ಕೂಲಿನ ಪ್ರಯೋಜನ ಪಡೆದು ತಮ್ಮ ಸ್ವಶಕ್ತಿಯಿಂದ ಕೆಲಸಮಾಡತಕ್ಕ ಮನೋಭಾವವನ್ನು ತೋರಿಸಿ ಸರ್ಕಾರದ ಸಹಾಯ ವನ್ನು ಪಡೆಯಬೇಕು. Rural Industrial Scheme ನ ಉದ್ದೇಶವೇ ಇದು. ಶ್ರೀ ಪ್ರಭಾಕರ್ ರವರು ಹೇಳಿದ ಹಾಗೆ ವೀವಿಂಗ್ ಸೆಂಟರ್ ಪ್ರಾರಂಭಿಸಿ ಅದರಲ್ಲಿಯೂ ಕೆಲಸ ಮಾಡಬಹುದು. ಅದರೆ ಸಾಧಾ ರಣವಾಗಿ ಈ ವೀವಿಂಗ್ ಸೆಂಟರ್‌ನಲ್ಲಿ ನಾನು ನೋಡಿದ ಹಾಗೆ ಖರ್ಚು ಜಾಸ್ತಿ, ಉತ್ಪತ್ತಿ ಕಡಿಮೆ. ಇದಕ್ಕೆ ಮೂಲ ಕಾರಣ ತಯಾರಾದ ಸಾಮಾನುಗಳಿಗೆ ಸರಿಯಾದ ಮಾರ್ಕೆಟ್ ಇಲ್ಲದೇ ಇರುವುದು. ಈ ವೀವಿಂಗ್ ಮತ್ತು ಬಣ್ಣದ ಸಾಮಾನು ತಯಾರಿಕೆ ಯಲ್ಲದೆ, smithy section ಸಹ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಈಗಾಗಲೇ ಇಲಾಖೆ ಯವರು ಇದನ್ನು ಯೋಚಿಸುತ್ತಿದ್ದಾರೆ. ಅಲ್ಲಿರತಕ್ಕ ಪರಿಸ್ಥಿತಿ ಏನು, ಅದನ್ನು ಮಾಡತಕ್ಕದ್ದು ಸೂಕ್ತವೇ ಅಲ್ಲವೇ ಎಂಬುದನ್ನು ಕೂಲಂಕಷವಾಗಿ ಪರೀಕ್ಷೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಸ್ಪೆಷಲ್ ಆಫೀ ಸರಿಗೆ ಆ ವಿಚಾರ ತಿಳಿಸುತ್ತೇವೆ. ರೂರಲ್ ಇಂಡ ಸ್ಟ್ರಿಯಲ್ ಸ್ಕೀಂ ಸ್ಪೆಷಲ್ ಆಫೀಸರು ಆ ವಿಚಾರದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳುತ್ತಾರೆ. ಅಷ್ಟೇ ಅಲ್ಲದೆ ಶ್ರೀ ಪ್ರಭಾಕರ್‌ರವರು ಹೇಳಿರ ತಕ್ಕ ಅಂಶಗಳನ್ನು ಸರ್ಕಾರದವರು ಕೂಲಂಕಷವಾಗಿ ಪರಿಪಾಲನೆ ಮಾಡುತ್ತಾರೆ ಎಂಬ ಭರವಸೆಯನ್ನು ಕೊಡುತ್ತೇನೆ. ಈ ಭರವಸೆಯ ಮೇಲೆ ಶ್ರೀ ಪ್ರಭಾ ಕರ್‌ರವರು ತಮ್ಮ ನಿರ್ಣಯವನ್ನು ವಾಪಸು ತೆಗೆದು ಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri K. PRABHAKAR.—I wish to press the resolution, Sir.

Mr. SPEAKER.—The question is :

"That this Assembly is of the opinion that an Industrial Production Centre be started in Nelamangala Taluk to improve the most deplorable economic conditions of the labourers in the taluk."

The resolution was negatived.

No. 21.—Prohibition of Dowry System in Marriages.

***Sri G. PUTTASWAMY** (Chikmagalur-Mudigere-Scheduled Castes).—Sir, I beg to move :

"That this Assembly is of the opinion that the system of receiving dowry at the time of marriage by the bridegroom's party and the bride's party prevailing in certain communities be prohibited with a view to prevent the poor from extravagant expenditure which they would incur by raising loans and thus afford scope for the upliftment of the society."

ಸ್ವಾಮಿ, ನಮ್ಮ ಸಮಾಜದಲ್ಲಿ ವರದಕ್ಷಿಣೆ ಮತ್ತು ವಧೂದಕ್ಷಿಣೆ ತೆಗೆದುಕೊಳ್ಳುವುದು ಅನೂಚಾನವಾಗಿ ಯಾವ ಕಾರಣದಿಂದಲೋ ಯಾವ ಆಧಾರವೂ ಇಲ್ಲದೆ, ಯಾವ ನೀತಿ ನಿಯಮವೂ ಇಲ್ಲದೆ ನಡೆದುಕೊಂಡು ಬಂದಿರತಕ್ಕ ಒಂದು ದುಷ್ಟ ಪದ್ಧತಿ ಆಗಿದೆ. ಇದು ಒಂದು illegal contract. ಇದರಿಂದ ಸಮಾಜಕ್ಕೆ ಬಹಳ ಧಕ್ಕೆ, ತೊಂದರೆ ಆಗುತ್ತಾ ಇದೆ, ಜನಗಳ ಆರ್ಥಿಕಾಭಿವೃದ್ಧಿ, ವಿದ್ಯಾಭಿವೃದ್ಧಿ ಮತ್ತು ಒಟ್ಟಿನಲ್ಲಿ ದೇಶಾಭಿವೃದ್ಧಿಗೆ ತೊಂದರೆಯಾಗುತ್ತಾ ಇದೆ ಎಂಬುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತೇ ಇರತಕ್ಕ ವಿಚಾರ. ಅದನ್ನು ನಾನು ಹೆಚ್ಚು ಲಂಬಿಸುವುದಕ್ಕೆ ಹೋಗುವುದಿಲ್ಲ. ಕೆಲವು ಪಂಗಡಗಳಲ್ಲಿ ವರದಕ್ಷಿಣೆ ಕೊಡುವ ಪದ್ಧತಿ ಇದೆ. ಕೆಲವು ಪಂಗಡಗಳಲ್ಲಿ ವಧೂದಕ್ಷಿಣೆ ಕೊಡುವ ಪದ್ಧತಿ ಇದೆ. ಹರಿಜನರಲ್ಲಿ ವಧೂದಕ್ಷಿಣೆ ಕೊಡುವ ಪದ್ಧತಿ ಈಗ ಬಹಳ ಜಾಸ್ತಿ ಆಗುತ್ತಾ ಇದೆ. ಈಗ ಆರ್ಥಿಕ ಮುಗ್ಗಟ್ಟು ಹೆಚ್ಚಿದೆ, ಹಾಗೂ ಸಾಮಾನುಗಳ ಬೆಲೆ ವಿಪರೀತವಾಗಿದೆ ; ಅದರ ಜೊತೆಗೆ ವಧೂದಕ್ಷಿಣೆ ತೆಗೆದುಕೊಳ್ಳತಕ್ಕ ಪದ್ಧತಿ ಹೆಚ್ಚಿದೆ. ಇದರಿಂದ ಸಮಾಜದಲ್ಲಿ ಅನೀತಿ ಹೆಚ್ಚಿ ಅದನ್ನು ತಡೆಗಟ್ಟುವುದಕ್ಕೆ ಬಹಳ ಕಷ್ಟವಾಗುತ್ತದೆ. ವರದಕ್ಷಿಣೆ ಆಗಲಿ, ವಧೂ ದಕ್ಷಿಣೆ ಆಗಲಿ ಕೊಡಬೇಕೆಂದರೆ ಅದಕ್ಕೆ ದುಡ್ಡು ಬೇಕು ; ಆ ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದಕ್ಕೆ ದುಡ್ಡು ಬೇಕು. ಈ ರೀತಿ ತಮ್ಮ ಮಕ್ಕಳನ್ನು ಯಾವ ರೀತಿ ಅಭಿವೃದ್ಧಿಗೆ ತರಬೇಕೋ ಆ ರೀತಿ ತರುವುದಕ್ಕೆ ಅವರು ಅಸಹಾಯಕರಾಗಿ ಏನು ಮಾಡುವುದಕ್ಕೂ ತೋಚದೆ ಅನೇಕ ಜನ ಹೆಣ್ಣುಮಕ್ಕಳು ಮದುವೆ ಆಗದೇ ಇದ್ದಾರೆ. ಆ ರೀತಿ ಎಷ್ಟು ಜನ ಇದ್ದಾರೆ

ಎಂಬುದನ್ನು ಸರ್ವೇ ಮಾಡಿ ನೋಡಿದರೆ ಗೊತ್ತಾಗುತ್ತದೆ. ನಮ್ಮ ಸರ್ಕಾರದವರು ಅನೇಕ ಪ್ರಗತಿದಾಯಕವಾದ ಯೋಜನೆಗಳನ್ನು ಕೈಕೊಂಡಿದ್ದಾರೆ. ಆದ್ದರಿಂದ ಇದೂ ಸಹ ಸರ್ಕಾರದವರು ಮಾಡಬೇಕಾದ ಒಂದು ಮೂಲಭೂತವಾದ ಸುಧಾರಣೆ ಎಂದು ಹೇಳಬಯಸುತ್ತೇನೆ. ದೇಶದಲ್ಲಿ ಈ ಒಂದು ಪದ್ಧತಿ ಇರುವುದು ಪ್ರಗತಿಪರಾಯಕವಾದ ಸೂಚನೆ ಅಲ್ಲ. ಸಮಾಜ ಉದ್ಧಾರವಾಗಬೇಕಾದರೆ ಈ ಸುಧಾರಣೆಯನ್ನು ಸರ್ಕಾರದವರು ಕಾನೂನು ಮೂಲಕ ಜಾರಿಗೆ ತಂದು ಈ ದುಷ್ಪ ಪದ್ಧತಿಯನ್ನು ವಜಾ ಮಾಡಬೇಕೇ ಹೊರತು ಬೇರೆ ಯಾವ ಮಾರ್ಗದಿಂದಲೂ ಸಾಧ್ಯವಾಗುವುದಿಲ್ಲ. ಈಗ ಎಷ್ಟು ಹಣ ವರದಕ್ಷಿಣೆ ವಧೂದಕ್ಷಿಣೆ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಂಡುಹಿಡಿಯುವುದೇ ಕಷ್ಟವಾಗಿದೆ. ನಾನೂ ಕೂಡ ಅನೇಕ ಸಂಘಗಳ ಮೂಲಕ ಏನಾದರೂ ಮಾಡಿ ಈ ದುಷ್ಪಪದ್ಧತಿಯನ್ನು ತಪ್ಪಿಸಬೇಕೆಂದು ಪ್ರಯತ್ನ ಮಾಡಿದ್ದೇನೆ. ಹೆಣ್ಣಿನ ಕಡೆಯವರಾಗಲಿ, ಇತರರಾಗಲಿ ಮುಂದೆ ಬಂದು ಇಷ್ಟು ಹಣ ವರದಕ್ಷಿಣೆ ಕೇಳುತ್ತಾರ ಎಂದು ಹೇಳುವುದಿಲ್ಲ. ಕಾರಣ ತಮ್ಮ ಹೆಣ್ಣನ್ನು ಎಲ್ಲಿ ಮದುವೆ ಮಾಡಿಕೊಳ್ಳುವುದಿಲ್ಲವೋ ಎಂಬ ಭಯ ಇರಬಹುದು. ಹೀಗಾಗಿ ಹೆಣ್ಣಿನ ಕಡೆಯವರು ಬಹಳವಾಗಿ ನಷ್ಟಕ್ಕೆ ಒಳಗಾಗುತ್ತಾ ಇದ್ದಾರೆ. ಸರ್ಕಾರದವರು ಈಗಾಗಲೇ ಅನೇಕ ಪ್ರಗತಿದಾಯಕವಾದ ಯೋಜನೆಗಳನ್ನು ಮಾಡಿದ್ದಾರೆ, ಸಂಸ್ಕೃತಿ ಪ್ರಸಾರವನ್ನು ಕೈಕೊಂಡಿದ್ದಾರೆ, ಭೂಸುಧಾರಣೆಯನ್ನು ಕೂಡ ಮಾಡಿದ್ದಾರೆ; ಹೀಗಿರುವಾಗ ಅವುಗಳಂತೆಯೇ ಇದೂ ಸಹ ಬಹಳ ಮಹತ್ವದ ಪ್ರಶ್ನೆ ಎಂದು ನನಗೆ ಅನ್ನಿಸುತ್ತದೆ. ಆದ್ದರಿಂದ ಸರ್ಕಾರದವರು ಈ ನಿರ್ಣಯವನ್ನು ಅಂಗೀಕಾರ ಮಾಡಿ ಅತಿ ಜಾಗ್ರತೆ ಸೂಕ್ತಕ್ರಮ ಕೈಕೊಳ್ಳುತ್ತಾರೆಂದು ನಿರೀಕ್ಷಣೆ ಮಾಡಿ ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that the system of receiving dowry at the time of marriage by the bridegroom's party and bride's party prevailing in certain communities be prohibited with a view to prevent the poor from extravagant expenditure which they would incur by raising loans and thus afford scope for the upliftment of the society."

*ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸರ್ಕಾರದವರು ಇತ್ತೀಚೆಗೆ ಜನರ ಕಷ್ಟಗಳನ್ನು ಹೋಗಲಾಡಿಸುವುದಕ್ಕೆ ದೇಶದ ಹಿತಸಾಧನೆಗೆ ಬಹಳ ಉಪಯುಕ್ತವಾದಂಥ ಕಾನೂನುಗಳನ್ನು ಮಾಡುತ್ತಾ ಇರುವುದು ಎಲ್ಲರಿಗೂ ವಿದಿತವಾಗಿದೆ. ನಮ್ಮ ಮಾನ್ಯ ಸ್ನೇಹಿತರು ಶ್ರೀ ಪುಟ್ಟಸ್ವಾಮಿಯವರು ತಂದಿರತಕ್ಕ ನಿರ್ಣಯದಲ್ಲಿ ಸೂಚಿಸಿರುವ ಈ ವರದಕ್ಷಿಣೆಯ ಪದ್ಧತಿ ನಮ್ಮ ದೇಶದಲ್ಲಿ ಬಹಳ ಕಾಲದಿಂದಲೂ ಇದೆ. ಹಿಂದೆ ಪರಕೀಯರ ಆಳ್ವಿಕೆ ಇದ್ದಾಗ ಕಾನೂನು ಮಾಡಿ ಇದನ್ನು ಹೋಗಲಾಡಿಸುವುದಕ್ಕೆ ಕಷ್ಟವಾಗಿತ್ತು. ಈಗ ಪ್ರಜಾ ಸರ್ಕಾರ ಏರ್ಪಟ್ಟಿರುವಾಗ ಬಡವರಾಗಲಿ, ಧನಿಕ ವರ್ಗದವರಾಗಲಿ ವರದಕ್ಷಿಣೆ ತೆಗೆದುಕೊಳ್ಳಕೂಡದು ಎಂಬುದಾಗಿ ನಿಷೇಧಮಾಡಬೇಕು. ಧನಿಕ ಜನರೂ ಕೂಡ ಎಷ್ಟೋ ಜನ ಕಷ್ಟಕ್ಕೆ ಸಿಕ್ಕಿ ಆಸ್ತಿಪಾಸ್ತಿ ಕಳೆದುಕೊಂಡು ಬಹಳ ಕಷ್ಟಕ್ಕೆ ಒಳಗಾಗಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಆದ್ದರಿಂದ ನಾನು ಅದನ್ನು ಹೆಚ್ಚು ಒತ್ತಾಯಪಡಿಸುವುದಕ್ಕೆ ಹೋಗುವುದಿಲ್ಲ. ಇದನ್ನು ಕಾನೂನು ಮೂಲಕ ತಪ್ಪಿಸಿ ದೇಶಾದ್ಯಂತ ಜಾರಿಗೆ ತರಬೇಕೆಂದು ಹೇಳಿ, ಮಾನ್ಯ ಸ್ನೇಹಿತರು ಈ ನಿರ್ಣಯವನ್ನು ತಂದದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಶ್ರೀ ಪುಟ್ಟಸ್ವಾಮಿಯವರು ತಂದಿರತಕ್ಕಂಥ ನಿರ್ಣಯದ ಉದ್ದೇಶ ಒಳ್ಳೆಯದೆಂದು ಹೇಳಿ ಸಭೆಯವರು ಒಪ್ಪಿಕೊಳ್ಳಬಹುದು. ಈ ಪದ್ಧತಿ ಪೂರ್ವದಲ್ಲಿ ಬಹಳ ದುಷ್ಪರಿಣಾಮವನ್ನು ಉಂಟುಮಾಡುತ್ತಾ ಇತ್ತು. ವಿದ್ಯಾಭ್ಯಾಸ ಅದರಲ್ಲೂ ಪಾಶಾತ್ಯ ಪದ್ಧತಿಯ ವಿದ್ಯಾಭ್ಯಾಸ ಈ ದೇಶದಲ್ಲಿ ಹೆಚ್ಚಿದ ಮೇಲೆ ಈ ಅಭ್ಯಾಸ ಬಹುಮಟ್ಟಿಗೆ ಕಡಿಮೆಯಾಗುತ್ತಾ ಬರುತ್ತಿದೆ. ಶಾಸನದ ಮೂಲಕ ತಡೆಗಟ್ಟತಕ್ಕ ವಿಷಯಗಳೂ ಇವೆ; ಶಾಸನದ ಮೂಲಕ ತಡೆಗಟ್ಟಿವುದಕ್ಕೆ ಸಾಧ್ಯವಿಲ್ಲದ ವಿಷಯಗಳೂ ಇವೆ. ಇದು ಈ ಗುಂಪಿಗೆ ಸೇರಿದ್ದು. ವರದಕ್ಷಿಣೆ ತೆಗೆದುಕೊಳ್ಳಕೂಡದು ಎಂಬ ಕಾನೂನು ಮಾಡಿದರೆ ಪರಿಶೀಲನೆ ಮಾಡತಕ್ಕವರು ಯಾರು? ಪೋಲೀಸಿನವರು. ಆದ್ದರಿಂದ ಪ್ರತಿಯೊಂದು ಮದುವೆಯಲ್ಲೂ ಕೂಡ ಸಿ.ಐ.ಡಿ.ಗಳು, ಪೋಲೀಸ್ ನವರು, ಪೋಲೀಸ್ ಇನ್ಸ್ಪೆಕ್ಟರುಗಳು ಹಾಜರಾಗಿರಬೇಕಾಗುತ್ತದೆ. ಅಷ್ಟೇ ಅಲ್ಲದೆ, ಅವರು ಲಂಚ ತೆಗೆದುಕೊಂಡರು, ಲಂಚ ಕೊಡಸೇ ಇದ್ದವರಿಗೆ ಕಿರುಕುಳ ಕೊಟ್ಟರು, ಕೆಲಸಕಾರ್ಯ ನಿಲ್ಲಿಸಿದರು ಎಂಬ ಆರೋಪಣೆಗಳು ಬಂದೇ ಬರುತ್ತವೆ. ಒಂದು ವೇಳೆ ಶಾಸನ ಮಾಡಿದರೂ ಕೂಡ ಕಾರ್ಯರಂಗಕ್ಕೆ ತರುವಾಗ ಪ್ರತಿಯೊಂದು ಮದುವೆಯಲ್ಲೂ ಸಂತೋಷದ ಸಮಾರಂಭದಲ್ಲಿ ಒಂದು ಕಷ್ಟವನ್ನು ತಂದುಹಾಕಿದಹಾಗಾಗುತ್ತದೆ. ಆದ್ದರಿಂದ ಉದ್ದೇಶ ಒಳ್ಳೆಯದಾದರೂ ಕೂಡ ಈ ವಿಷಯದಲ್ಲಿ ಕಾನೂನು ಮಾಡಿ ಒತ್ತಾಯ ಮಾಡುವುದಕ್ಕಿಂತ ಈ ಸಭೆಯ ಅಭಿಪ್ರಾಯ ಹೇಗಿದೆ ಎಂಬುದು ದೇಶಕ್ಕೆ ಗೊತ್ತಾಗುವಂತೆ ಮಾಡಿ ಜನರು ಈ ಪದ್ಧತಿಯನ್ನು ಕ್ರಮಕ್ರಮೇಣ ತಾವೇ ನಿಲ್ಲಿಸುವ ಹಾಗೆ ಪ್ರಚಾರದ ಮೂಲಕ ಮಾಡುವುದು ಒಳ್ಳೆಯದು. ಶಾಸನ ಮಾಡಿದರೂ ಕೂಡ ಜಾರಿಗೆ ತರತಕ್ಕ ಕಾಲದಲ್ಲಿ ತಾವುಗಳು ಈಗ ಏನೇನು ಕಷ್ಟಗಳು ಇವೆ ಎಂದು ಹೇಳಿದಿರೋ ಅದಕ್ಕಿಂತ ಹೆಚ್ಚಿನ ಕಷ್ಟ ಈ ಶಾಸನದಿಂದ ಉಂಟಾಗುತ್ತದೆ ಎಂಬುದು ಸ್ವಲ್ಪ ಯೋಚನೆ ಮಾಡಿದರೆ ತನ್ನಷ್ಟಕ್ಕೆ ತಾನೇ ಹೊಳೆಯುತ್ತದೆ. ಆದ್ದರಿಂದ ಇದನ್ನು ಮಾನ್ಯ ಸದಸ್ಯರು ಪಾಪಸು ತೆಗೆದುಕೊಳ್ಳಬೇಕೆಂದು ಹೇಳಿ ಅವರನ್ನು ಕೇಳಿಕೊಳ್ಳುತ್ತೇನೆ.

Sri G. PUTTASWAMY.—I beg leave to withdraw the resolution.

The resolution was, by leave, withdrawn.

Mr. SPEAKER.—Resolution No. 22—Member absent. No. 23 is already over. No. 24—the date itself is over. No. 40 also is a similar resolution. No. 25, Sri K. S. Vasan is not here. No. 26, Srimathi Bellary Siddamma.

Sri S. SRINIVASA IYENGAR (T.-Narasipur).—When I sent my resolution, there was plenty of time, Sir. I may be permitted to move the resolution deleting that portion of it.

Mr. SPEAKER.—No, how can we do it? The House will now rise for lunch and meet at 3-30.

The House rose for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair]

No. 26.—Constitution of a Committee of Members of Assembly and Council to start Mobile Ophthalmic Dispensaries.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—

''ಸಂಸ್ಥಾನದ ಪ್ರಜೆಗಳಿಗೆ ಅದರಲ್ಲೂ ಮುಖ್ಯವಾಗಿ ಗ್ರಾಮದ ನಿವಾಸಿಗಳಿಗೆ, ಸಾಮೂಹಿಕ ನೇತ್ರ ಶಸ್ತ್ರ ಚಿಕಿತ್ಸೆಯನ್ನು ಮುಫತ್ತಾಗಿ ನಡೆಯಿಸುವ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುವ ಕಣ್ಣಾಸ್ಪತ್ರೆಯ ಯೋಜನೆಯನ್ನು ಸಲಹೆ ಮಾಡುವುದಕ್ಕಾಗಿ ವಿಧಾನ ಸಭೆಯ ಮತ್ತು ವಿಧಾನಪರಿಷತ್ತಿನ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ಏರ್ಪಡಿಸಬೇಕೆಂದೂ ಮತ್ತು ಆ ಯೋಜನೆಗಾಗಿ ಬಡ್ಜೆಟ್ಟಿನಲ್ಲಿ ಐದು ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದೂ ಈ ಸಭೆಯವರು ಅಭಿಪ್ರಾಯ ಪಡುತ್ತಾರೆ.''

ಎಂದು ಈ ನಿರ್ಣಯ ಕಳಿಸಿದ್ದೇನೆ. ಇದರ ಮೇಲೆ ನಾಲ್ಕು ಮಾತನ್ನಾಡುತ್ತಾ ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ: ನಮ್ಮ ಮೈಸೂರು ದೇಶದಲ್ಲೇ ಅಲ್ಲ, ಇತರ ದೇಶಗಳಲ್ಲೂ ಸಹ ನೇತ್ರ ಚಿಕಿತ್ಸೆಯಲ್ಲಿ ಡಾಕ್ಟರ್ ಮೋದಿಯವರಂತೆ ಕೆಲಸ ಮಾಡುವ ಮಹಾಪುರುಷರನ್ನು ನಾನು ಮಾತ್ರ ನೋಡಲಿಲ್ಲ. ದೇಶ ತಿರುಗಿದವರೇ ಅಲ್ಲ, ಪ್ರಪಂಚದಲ್ಲೆಲ್ಲಾ ಸಂಚಾರ ಮಾಡಿ ಬಂದಿರುವವರೂ ಸಹ ಒಪ್ಪಿದ್ದಾರೆ. ಅವರ ಕೆಲಸ ಬಹಳ ಧೈರ್ಯದತ್ತವಾಗಿ ಬಂದಿರುವುದು. ಅವರ ಕಾತುರತೆ, ಬುದ್ಧಿವಂತಿಕೆ ಎಷ್ಟು ಊಹೆ ಮಾಡಿದರೂ ಸಾಲದು, ಎಷ್ಟು ಹೊರಪಡಿಸಿದರೂ ಸಾಲದೆಂಬುದನ್ನು ಪ್ರತಿಯೊಬ್ಬರೂ ಜನಜನಿತವಾಗುವಂತೆ ಬಹಳವಾಗಿ ಹೊಗಳಿದ್ದಾರೆ. ಉಪಯುಕ್ತವಾದ ಕೆಲಸವನ್ನು ಅವರು ಮಾಡುತ್ತಿದ್ದಾರೆಂದು ಹೇಳಿದರೆ ಅದಕ್ಕೆ ಯಾರದೂ ವಿರೋಧವಿಲ್ಲ ಎಂದು ತಿಳಿದುಕೊಂಡಿದ್ದೇನೆ. ಕೆಲವರ ವಿರೋಧ ವಿರಬಹುದು. ಡಾಕ್ಟರ್ ಮೋದಿಯವರು ಯಾವ ತರಹ ಸರ್ಟಿಫಿಕೇಟನ್ನೂ ಪಡೆದಿಲ್ಲ, ಅವರು ಯಾವ ಕಾಲೇಜಿನಲ್ಲಿ ಓದಿದ್ದಾರೆ, ಯಾವ ಪರೀಕ್ಷೆಯನ್ನು ಪಾಸು ಮಾಡಿಕೊಂಡು ಬಂದಿದಾರೆ ಎಂದು ವಾದ ಮಾಡಿದ್ದಾರೆಂದು ಕೇಳಿದ್ದೇನೆ. ಆದರೆ ನನ್ನ ಮನಸ್ಸಿಗೆ ತೋರುವುದು, ಯಾವ ಕೆಲಸದಲ್ಲೇ ಆಗಲಿ ಯಾರೇ ಆಗಲಿ ಪ್ರವೀಣರಾಗಬೇಕಾದರೆ ಅದು ಕೇವಲ ಅಭ್ಯಾಸದಿಂದ ಅಥವಾ ಕಾಲೇಜು ವಿದ್ಯೆ ಓದುವುದರಿಂದ ಆಗುತ್ತದೆ ಎಂದು ಹೇಳುವುದು ತಪ್ಪು. ಏಕೆಂದರೆ ಕೆಲವರು ದೊಡ್ಡ ದೊಡ್ಡ ವಿದ್ಯಾವಂತರು, ಮಹಾಕವಿಗಳು ಮತ್ತು ಗಾಯನದಲ್ಲಿ ಪಾಂಡಿತ್ಯ ಪಡೆದಿರುವವರು ಇಂಥವರನ್ನು ನೋಡಿದರೆ, ಅವರ ವಿಚಾರ ಯೋಚನೆಮಾಡಿದರೆ ಕಾಲೇಜಿನಲ್ಲಿ, ಪಾಶ್ಚಾತ್ಯ ದೇಶಗಳಲ್ಲಿ ಓದಿದವರಿಗಿಂತ ಹೆಚ್ಚಾದ ಪ್ರಾವೀಣ್ಯತೆಯನ್ನು ಸಂಪಾದಿಸಿದ್ದಾರೆಂದು ಕಂಡುಬರುವುದು. ಹೇಗೆ ಅದು ಬಂತು ಎಂದು ಕೇಳಿದರೆ ಭಗವಂತನ ದಯೆಯಿಂದ, ಪೂರ್ವಜನ್ಮದ ಸಂಸ್ಕೃತಿ ಉಳಿದಿರುತ್ತದೆಯೋ ಏನೋ, ಆ ಬಲದಿಂದ ಈ ತರಹ ಒಂದು ಪ್ರಭಾವ ಬಂದಿರಬಹುದೇ ಹೊರತು ಕೇವಲ ಕಲಿಯುವುದರಿಂದ ಬಂದಿದ್ದಲ್ಲ ಎಂಬುದು ನನ್ನ ಅಭಿಪ್ರಾಯ. ಇದು ನಿಜವೆಂದು ಭಾವಿಸುತ್ತೇನೆ. ಏಕೆಂದರೆ ಅವರ ಆಪರೇಷನ್ ನೋಡಿದರೆ ಎಷ್ಟು ಚಮತ್ಕಾರದಿಂದ ಮಾಡುತ್ತಿದ್ದಾರೆ? ಅವರ ಐದು ಬೆರಳುಗಳು ಒಂದೇ ಸಮನಾಗಿ ಆಡುತ್ತಿದ್ದರೆ ಅದರಲ್ಲೇ ಭಗವಂತ ನಿದ್ದಾನೆ, ಅದು ಮನುಷ್ಯ ಮಾಡುವ ಕೆಲಸವಲ್ಲ ಎಂದು ಕಾಣಬರುತ್ತದೆ. ಅಷ್ಟು ಹುಷಾರಿನಿಂದ ಅಷ್ಟು ಚಟುವಟಿಕೆಯಿಂದ ನೂರಾರು ಜನರು ನುತ್ತಲೂ ಓಡಾಡುತ್ತ ಅವರನ್ನು ಮಾತನಾಡಿಸುತ್ತಿದ್ದರೂ ಒಂದು ಕಡೆಯೂ ಗಮನಕೊಡದೆ ನೇತ್ರ ಚಿಕಿತ್ಸೆ ಮಾಡುವುದನ್ನು ನೋಡಿದರೆ ತಪಸ್ಸು ಮಾಡುವ ಯೋಗಿಗೂ ಬಾರದಿರುವ ಏಕನಿಷ್ಠೆಯಿಂದ ಆಪರೇಷನ್ ಮಾಡುತ್ತಿದ್ದಾರೆ, ಅಂಥ ಕೆಲಸಮಾಡುವ ಮನುಷ್ಯರನ್ನು ನಾನು ಮಾತ್ರ ನೋಡಿಲ್ಲ ಎಂದು ಸೂಚಿಸಬೇಕಾಗಿದೆ. ಅಂಥವರಿಗೆ ಈಗ ಸರ್ಕಾರದವರೇನು ಮಾಡಬೇಕೆಂದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ಒಂದಿಷ್ಟು ಹಣ ಕೃತಜ್ಞತೆಮಾಡಿ ಮಂಜೂರುಮಾಡಬೇಕು; ಹಾಗೆ ಮಾಡಿದರೆ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ. ಈಗ ಐದು ಲಕ್ಷ ರೂಪಾಯಿಗಳನ್ನಾದರೂ ನೇತ್ರ ಚಿಕಿತ್ಸೆಗಾಗಿ ಮಂಜೂರು ಮಾಡಬೇಕು ಮತ್ತು ಸಂಚಾರಿ ಆಸ್ಪತ್ರೆ ಮಾಡಬೇಕು. ಡಾಕ್ಟರ್ ಮೋದಿಯವರಲ್ಲದೆ ಇತರ ಡಾಕ್ಟರುಗಳು ಯಾರಾದರೂ ಮುಂದೆ ಬಂದರೆ ಅವರಿಗೂ ಈ ಕೆಲಸದಲ್ಲಿ ಪ್ರೋತ್ಸಾಹ ನೀಡಬಹುದು. ಕೆಲವರು ಹೊರಗಡೆಯವರು ಈ ಕೆಲಸ ಮಾಡಲು ಮುಂದೆ ಬಂದಿದ್ದಾರೆ ಎಂದು ಕೇಳಿದೆ. ಅವರೂ ಬರಬಹುದು. ಬರೀ ನೇತ್ರ ಚಿಕಿತ್ಸೆಯಲ್ಲ; ದೇಶದಲ್ಲಿ ಬಹಳ ಬಡತನವಿದೆ, ಆರ್ಥಿಕ ಮುಗ್ಗಟ್ಟಿದೆ, ಅದರಲ್ಲೂ ಹಳ್ಳಿಗಾಡಿನವರಿಗೆ ನೇತ್ರ ಚಿಕಿತ್ಸೆಗೆ ಅಥವಾ ಆಪರೇಷನ್ಗೆ ಸರಿಯಾದ ಸೌಕರ್ಯವಿಲ್ಲ. ಅವರು ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯಬೇಕಾದರೆ ಕಂಬ ಕಂಬಕ್ಕೂ ಕೈಮುಗಿಯಬೇಕು; ಅಷ್ಟಾದರೂ ಡಾಕ್ಟರ ದರ್ಶನವಾಗುವುದಿಲ್ಲ. ಹಾಗಿರುವಾಗ ಇಂಥ ಸಂಚಾರಿ ಆಸ್ಪತ್ರೆ ಏಕೆ ಮಾಡಬಾರದು? ಇದಕ್ಕೆ ವ್ಯವಸ್ಥೆಮಾಡಿ 5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಸಂಚಾರಿ ಆಸ್ಪತ್ರೆಗಳಿಗೆ ಅವಕಾಶ ಕೊಟ್ಟರೆ, ದೇಶದ ಜನರಿಗೆ ಈ ಸೌಕರ್ಯ ಒದಗಿಸಿದರೆ, ಬಹಳ ದೊಡ್ಡ ಪುಣ್ಯಮಾಡಿದಹಾಗೆ. ಇತರ ಪಾಶ್ಚಾತ್ಯ ದೇಶಗಳಲ್ಲಿ ಇಂದು ಆಸ್ಪತ್ರೆಗಳಲ್ಲಿ ಆರೋಗ್ಯ ದೃಷ್ಟಿಯಿಂದ ಆಹಾರ ವ್ಯವಸ್ಥೆಮಾಡಿ ಪ್ರತಿಯೊಬ್ಬರಿಗೂ ಸುಲಭವಾಗಿ ಮತ್ತು ಉಚಿತವಾಗಿ ಅವಕಾಶಕೊಟ್ಟು ಮನೆ ಬಾಗಿಲಿಗೆ ಹೋಗಿ ಆರೋಗ್ಯ ನೋಡಿಕೊಳ್ಳುತ್ತಿದ್ದಾರೆಂದು ಹೇಳುತ್ತಾರೆ. ಅದರಂತೆ ದೊಡ್ಡದಾಗಿ ವ್ಯವಸ್ಥೆಮಾಡಲು ಸಾಧ್ಯವಿಲ್ಲದಿದ್ದರೆ ಒಂದೊಂದು ತಾಲ್ಲೂಕಿಗೆ ಒಂದು ವರ್ಷ ಅಥವಾ ಆರು ತಿಂಗಳೆ